ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು :

ರೇಷ್ಮೆ ಬೆಳೆಗಾರರಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಬಗ್ಗೆ

61 (248) ಶ್ರೀ ಅಮರೇಶ್: ಕಾರ್ಮಿಕ ಮತ್ತು ರೇಷ್ಮೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೋಲಾರ ಜಿಲ್ಲೆಯಲ್ಲಿ ಅತೀ ಹೆಚ್ಚಿನ ರೈತರು ರೇಷ್ಮೆ ಬೆಳೆಯನ್ನು ಅವಲಂಬಿಸಿರುವುದರಿಂದ ಇವರುಗಳು ಬೆಳೆಯುವ ರೇಷ್ಮೆಗೆ ಸಾಕಷ್ಟು ಬೆಲೆಯಿಲ್ಲದೆ ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲಿ, ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ;

ಇ) ರೇಷ್ಮೆ ಬೆಳೆಗಾರರಿಗೆ ಹುಳು ಮನೆ ಕಟ್ಟಲು ಸಬ್ಸಿಡಿ ದರದಲ್ಲಿ ಸಾಲ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ (ವಿವರ ನೀಡುವುದು)?

ಶ್ರೀ ಬಿ. ಎನ್. ಬಚ್ಚೇಗೌಡ (ಕಾರ್ಮಿಕ ಮತ್ತು ರೇಷ್ಮೆ ಸಚಿವರು):–

ಅ) ರಾಜ್ಯದಲ್ಲಿ 1,25,700 ರೇಷ್ಮೆ ಬೆಳೆಗಾರರ ಕುಟುಂಬಗಳಿದ್ದು ಇದರಲ್ಲಿ 20,513 ಕುಟುಂಬಗಳು ಕೋಲಾರ ಜಿಲ್ಲೆಯಲ್ಲಿದ್ದಾರೆ. ರೇಷ್ಮೆ ಗೂಡಿನ ಧಾರಣೆಗಳು ಇಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಇ) ಜಿಲ್ಲಾ ಸಹಕಾರ ಬ್ಯಾಂಕು ಮತ್ತು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಗಳು ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಹುಳು ಮನೆ ಸೇರಿದಂತೆ ರೇಷ್ಮೆ ಕೃಷಿ ಚಟುವಟಿಕೆಗಳಿಗಾಗಿ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯಗಳನ್ನು ನೀಡುತ್ತಿವೆ.

ಶ್ರೀ ಅಮರೇಶ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಬೆಳೆಗಾರರಿಗೆ ಇದುವರೆಗೂ ಕೂಡ, ಸಂಕಷ್ಟದಲ್ಲಿರುವಂತಹ ರೈತರಿಗೆ ಸಹಾಯ ಧನ ಒದಗಿಸಿದ್ದೀರಾ? ಮತ್ತೊಂದು ಏನೆಂದರೆ, ಅಲ್ಲಿ ರೇಷ್ಮೆಯನ್ನು ಬೆಳೆಯುವಂತಹ ರೈತರಿಗೆ ಸಬ್ಸಿಡಿ ದರದಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸರಕಾರ ಒದಗಿಸುವಂತಹ ಹಣ ಎಷ್ಟು ಎಂದು ಕೇಳಿದ್ದೇನೆ. ಆದರೆ, ಅದರಲಿ ಈ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಮಾಡಿದ್ದೇವೆ ಎಂದು ಹೇಳುವುದನ್ನು ಬಿಟ್ಟರೆ ಅದಕ್ಕೆ ಬೆಂಬಲ ಬೆಲೆಯನ್ನು ಘೋಷನೆ ಮಾಡಬೇಕು. ಮಂತ್ರಿಗಳು ಈಗಲೂ ಕೂಡ ಭತ್ತದ ಬೆಳೆಗೆ ಯಾವ ರೀತಿ ನೀಪು ಘೋಷನೆ ಮಾಡಿದ್ದೀರಿ ಅದೇ ರೀತಿ ರೇಷ್ಮೆಗೂ ಕೂಡ ರಾಜ್ಯ ಸರ್ಕಾರದಿಂದ ರೈತರಿಗೆ ಪ್ರತಿ ಕೆ.ಜಿ.ಗೆ 200–300 ರೂಪಾಯಿಗಳಂತೆ ತಾವು ಯಾವುದಾದರೂ ಸಬ್ಸಿಡಿಯನ್ನು ಕೊಡಲೇಬೇಕು. ಅದಕ್ಕೆ ಬೆಂಬಲ ಬೆಲೆಯನ್ನು ಘೋಷಣೆ ಮಾಡುಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳುತ್ತೇನೆ.

ಶ್ರೀ ಆರ್. ನರೇಂದ್ರ: ಮಾನ್ಯ ಅಧ್ಯಕ್ಷರೆ, ರೇಷ್ಮೆ ಗೂಡಿಗೆ ಒಂದು ಕೆ.ಜಿ.ಗೆ ನೂರು ರೂಪಾಯಿಗಳಿಗಿಂತ ಕಡಿಮೆ ಬಂದರೆ ಬೆಂಬಲ ಬೆಲೆ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ, ಘೋಷಣೆ ಮಾಡಿದಂತಹ ಬೆಂಬಲ ಬೆಲೆಯನ್ನು ಇದುವರೆಗೂ ಕೊಡಲಿಲ್ಲ. ಸರ್ಕಾರ ಘೋಷಣೆ ಮಾಡಿದೆ. ಆದರೆ, ಇದುವರೆಗೂ ಕೂಡ ಯಾವುದೇ ಬೆಂಬಲ ಬೆಲೆಯನ್ನು ಕೊಡಲೇ ಇಲ್ಲ.

ಶ್ರೀ ಬಿ. ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಅಮರೇಶ್ ರವರು ಕೇಳಿರುವ ಪ್ರಶ್ನೆಗೆ ರೇಷ್ಮೆ ಉತ್ಪಾದನೆ ಅಂದರೆ ರೇಷ್ಮೆ ಕೃಷಿಯಲ್ಲಿ ತೊಡಗಿಸಿಕೊಂಡಿರುವಂತಹವರು ಇಡೀ ರಾಜ್ಯದಲ್ಲಿ ಅತಿ ಹೆಚ್ಚಾಗಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯಲ್ಲಿದ್ದಾರೆ. ಈಗ ವಿಭಜಿತವಾದ ಮೇಲೆ ರೇಷ್ಮೆ ಕೃಷಿಯ ಪ್ರದೇಶ ಇರುವಂತಹದ್ದು 13,365 ಹೆಕ್ಟೇರ್‌ಗೆ ಬಂದಿದೆ. ಬಂಗಾರಪೇಟೆ, ಕೋಲಾರ, ಮಾಲೂರು, ಮುಳಬಾಗಿಲು ಹಾಗೂ ಶ್ರೀನಿವಾಸಪುರ ಒಟ್ಟಾರೆ ಈ ಐದು ತಾಲ್ಲೂಕುಗಳಲ್ಲಿ 13,365 ಹೆಕ್ಟೇರ್ ಪ್ರದೇಶ ಇವತ್ತು ಬಂದಿರುವಂತಹದ್ದು, ಜೊತೆಗೆ 20,513 ಕುಟುಂಬಗಳು ಇದರಲ್ಲಿ ತೊಡಗಿಸಿಕೊಂಡಿರುವಂತಹದ್ದು, ಇವತ್ತು ರೇಷ್ಮೆಯ ಬಗ್ಗೆ ತಾವು ಕೇಳಿರುವಂತಹ ಪ್ರಶ್ನೆ. ಇವತ್ತು ರೇಷ್ಮೆ ಬೆಳೆಯನ್ನು

ಅವಲಂಬಿಸಿಕೊಂಡಿರುವಂತಹವರು ಬೆಳೆಯುವ ರೇಷ್ಮೆಗೆ ಸಾಕಷ್ಟು ಬೆಲೆ ಇಲ್ಲದೇ ಇರುವಂತಹದ್ದು, ಕಳೆದ ಫೆಬ್ರವರಿಯಿಂದ ಈ ಫೆಬ್ರವರಿವರಿಗೆ ಅಂದರೆ ಈ ಬಜೆಟ್‌ವರೆಗೂ, ಇದುವರೆಗೂ ಅನೇಕ ಬಾರಿ ರೇಷ್ಮೆ ಬೆಲೆ ಏರುಪೇರಾಯಿತು. ಮಹಾರಾಷ್ಟ್ರದಲ್ಲಿ ಕಕೂನ್, ಅಂದರೆ ನಮ್ಮ ರೇಷ್ಮೆ ಗೂಡಿಗೆ, ಅಂದರೆ ರೈತ ಬೆಳೆದಂತಹ ರೇಷ್ಮೆ ಬೆಳೆದಂತಹ ರೇಷ್ಮೆ ಗೂಡಿಗೆ, ಇದಕ್ಕೆ ಸಾಕಷ್ಟು ಪ್ರಯತ್ನಗಳನ್ನು ಕೇಂದ್ರ ಸರ್ಕಾರದಲ್ಲಿ ನಾವು ಮಾಡಿದೆವು. ಹಾಗೆಯೇ, ಮಾನ್ಯ ಕೆ. ಹೆಚ್. ಮುನಿಯಪ್ಪನವರು ಆ ಪ್ರದೇಶದಿಂದ ಬಂದಿರುವಂತಹವರು, ಮಾನ್ಯ ವೀರಪ್ಪ ಮೊಯಿಲಿಯವರು, ನಾವು ಮತ್ತು ನಮ್ಮ ಹಿಂದೆ ಮುಖ್ಯಮಂತ್ರಿಗಳಾಗಿದ್ದಂತಹ ಮಾನ್ಯ ಯಡಿಯೂರಪ್ಪನವರು ನಾವೆಲ್ಲಾ ಸದಸ್ಯರು ಹೋಗಿ, ಮಾನ್ಯ ಪ್ರಧಾನ ಮಂತ್ರಿಗಳನ್ನೂ ಬೇಟಿಯಾಗಿದ್ದೆವು. ಮತ್ತೆ Finance Minister ಆದಂತಹ ಮಾನ್ಯ ಪ್ರಣಾಬ್ ಮುಖರ್ಜಿಯವರನ್ನೂ ಸಹ ಭೇಟಿಯಾಗಿದ್ದೆವು. ಹಾಗೆಯೇ ನಮ್ಮ Textile Minister ರವರನ್ನೂ ಭೇಟಿಯಾಗಿ ನಮಗೆ ಕನಿಷ್ಠ ಬೆಲೆ ಅಂದರೆ MSP, ಏಕೆಂದರೆ, ತಾವು ಈಗ ಕೇಳಿದ್ದೀರಿ, ಆಹಾರ ಧಾನ್ಯಗಳು Food grains ಗೆ ಕನಿಷ್ಠ ಬೆಲೆ ಇದೆ. MSP ಎಂದರೆ Minimum Support Price ಬೇರೆ ಬೇರೆಯವುಗಳಿಗೆ ಇರುತ್ತದೆ. ಆದರೆ, ರೇಷ್ಮೆಗೆ Minimum Support Price ದೇಶದಲ್ಲಿ ಇದುವರೆಗೂ ಇಲ್ಲ. MSP ಯನ್ನು Central Government fix ಮಾಡಬೇಕು. ಇದನ್ನೂ ಕೇಳಿದ್ದೇವೆ ಮತ್ತು ನಮಗೆ 200 ಅಥವಾ 300 ಕೊಟಿ ರೂಪಾಯಿಗಳ revolving fund ಕೊಡಿ ಎಂದು ಕೇಳಿದ್ದೇವೆ. ನಾವೂ ಕೂಡ 100 ಕೋಟಿ ರೂಪಾಯಿಗಳನ್ನು ಹಾಕುತ್ತೇವೆ ಎಂದು ಹೇಳಿದ್ದೇವೆ. ಚೈನಾದಿಂದ ಆಮದು ಮಾಡಿಕೊಂಡು. ಮುಖ್ಯವಾಗಿ ಮಾನ್ಯ ಅಮರೇಶ್ ರವರೇ, ರೇಷ್ಮೆ ಬೆಲೆ ಕುಸಿತವಾದ ಕಾರಣ, ಆಮದು ಶುಲ್ಕ 31% ಏನಿತ್ತು ಅದನ್ನು 5%ಗೆ ತೆಗೆದುಕೊಂಡು ಬಂದುಬಿಟ್ಟರು. 5%ಗೆ ಬಂದಿದ್ದರಿಂದ ನಮ್ಮ ಮಾರ್ಕೆಟ್‌ಗೆ ರೇಷ್ಮೆ ಗೂಡಿನ ಬೆಲೆ ಬಹಳ ಕುಸಿತವಾಯಿತು. ಹಾಗೆಯೇ ರೇಷ್ಮೆ ಬೆಲೆಯೂ ಕೂಡ reelers ಗೆ ಕುಸಿತವಾಯಿತು, reel ಮಾಡುವವರಿಗೆ ಕುಸಿತವಾಯಿತು. ಅದರಿಂದ ಇದು ಹೊಡೆತ ಬಿದ್ದಿರುವಂತಹದ್ದು. ಈಗ ನಾವು ಏನು ಮಾಡಿದೆವು ಎಂದರೆ, ಮೊನ್ನೆ ಇದಕ್ಕೆ ಇದ್ದಹಾಗೆ ನಮ್ಮ ರಾಮನಗರ, ಕೊಳ್ಳೇಗಾಲ ಹಾಗು ಅನೇಕ ಮಾರ್ಕೆಟ್‌ಗಳಲ್ಲಿ 80 ರೂಪಾಯಿಗಳಿಗೆ ಬಂದುಬಿಟ್ಟಿತು. 80 ರೂಪಾಯಿಗಳೀಗೆ ಬಂದಾಗ ಸಾಕಷ್ಟು ಜನ ಕಂಗಾಲಾಗಿ, ಧರಣಿ ಕುಳಿತು, ರಸ್ತೆ ರೋಖೋ ಮಾಡಿ ತೊಂದರೆ ಮಾಡಿದರು. ಆಗ ಕೇಂದ್ರ ಸರ್ಕಾರದವರನ್ನು ಸಹಾಯ ಮಾಡಿ ಎಂದು ಕೇಳಿಕೊಂಡೆವು. ಅವರು ಅದಕ್ಕೆ

ಏನೂ ಕಿವಿಗೆ ಹಾಕಿಕೊಳ್ಳಲಿಲ್ಲ. ನಿರಂತರವಾಗಿ ಬೇಕಾದಷ್ಟು ಸಲ ಪ್ರಯತ್ನಗಳು ನಡೆಯುತ್ತಿವೆ. ನೀವು ಅರ್ಧ ಕೊಡಿ. ನಾವು ಅರ್ಧ ಕೊಡುತ್ತೇವೆ. ಮಾಡುತ್ತೇವೆ ಎಂದು ಪ್ರಯತ್ನಗಳು ನಡೆಯುತ್ತಿವೆ. ಅದಕ್ಕೆ ಕೂಡಲೇ Minimum Support Price ಎಂದು ಮಾಡಿ, 160 ರೂಪಾಯಿಗಳಂತೆ Support ಎಂದು ಅಲ್ಲ, ಒಂದು ಸಹಾಯ ಧನ ಎಂದು ಮಾಡಿಕೊಂಡು 160 ರೂಪಾಯಿಗಳಿಗಿಂತ ಕಡಿಮೆ ಇಳಿದರೆ 30 ರೂಪಾಯಿಗಳ ಸಹಾಯ ಧನ ಕೊಡಬೇಕೆಂದು ತೀರ್ಮಾನ ಮಾಡಿಕೊಂಡು ನಾವು ಈಗ ಕೊಡುತ್ತಿದ್ದೇವೆ, ಅಂದರೆ 190 ರೂಪಾಯಿಗಳು ಆಗುತ್ತದೆ. ನೀವು ಹೇಳಿದ ಹಾಗೆ ನಾವು ಕೇಂದ್ರ ಸರ್ಕಾರವನ್ನು ಕೇಳಿರುವಂತಹದ್ದು CB ಎಂದರೆ cross breed. ಮಿಶ್ರ ತಳಿಗೆ ಬೆಳೆ ತೆಗೆಯುವುದಕ್ಕೆ minimum 220 ರೂಪಾಯಿಗಳು ಬೇಕಾಗುತ್ತದೆ. ಹಾಗೆಯೇ Bivoltine ಎಂದು ಹೇಳಿ ಅದನ್ನು ದ್ವಿತಳಿ ಗೂಡನ್ನು ಅದಕ್ಕೆ ಸುಮಾರು 250 ರೂಪಾಯಿಗಳಿಗಿಂತ ಮೇಲೆ ಕೊಡಿ ಎಂದು ಕೇಳಿದ್ದೇವೆ. ಈ ರೀತಿ ಇರುವಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಇತ್ತೀಚೆಗೆ ಸ್ವಲ್ಪ ಸುಧಾರಣೆಯಾಗಿದೆ. ಮತ್ತೆ ಈ ಮಾರ್ಚ್‌ಗೆ ಬಜೆಟ್ present ಮಾಡುವ ಹೊತ್ತಿಗೆ ಕೇಂದ್ರ ಸರ್ಕಾರಕ್ಕೆ ಹೋಗಿ ಕೇಳಿ ಈ ವಿಷಯದಲ್ಲಿ ನಾವು ಹೇಳಿದ ಹಾಗೆ ಹೆಚ್ಚು ಬೆಲೆಯನ್ನು ನಿಗದಿಪಡಿಸಬೇಕು. ಬೇಕಾದರೆ Central Silk Board ಕೊಡಲಿ. ನಾವು ರಾಜ್ಯ ಸರ್ಕಾರದಿಂದ ಕೊಡುತ್ತೇವೆ. Revolving Fund ಅನ್ನು ನಾವೂ ಅರ್ಧ ಹಾಕುತ್ತೇವೆ. ಅವರದೂ ಹಾಕಲಿ ಇದು ಈಗ ಇರತಕ್ಕಂತಹ ಪರಿಸ್ಥಿತಿ, ಆದ್ದರಿಂದ, ತಾವು ಕೇಳಿರುವಂತಹ ಮೊದಲನೇ ಪ್ರಶ್ನೆಗೆ ಈ ಒಂದು ಉತ್ತರವಿದೆ. ಎರಡನೇ ಪ್ರಶ್ನೆ ತಾವು ಕೇಳಿರುವಂತಹದ್ದು ಏನೆಂದರೆ, ಹಾಗಿದ್ದಲ್ಲಿ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಸರ್ಕಾರ ಉದ್ದೇಶಿಸಿದೆಯೇ? ಎಂದು ಕೇಳಿದ್ದೀರಿ. ಇದು ನಾವು ಉದ್ದೇಶಿಸಿರುವ ಪ್ರಶ್ನೆಯಲ್ಲ. ಇದರಲ್ಲಿ ನಮ್ಮದೂ responsibility ಇದೆ. ಕೇಂದ್ರ ಸರ್ಕಾರ MSP ತಾವು ಕೇಳಿರುವಂತಹದ್ದು, ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದು ಕೇಂದ್ರ ಸರ್ಕಾರ, ಅದು ಆದಮೇಲೆ ರೇಷ್ಮೆ ಬೆಳೆಗಾರರಿಗೆ ಹುಳು ಮನೆ ಕಟ್ಟಲು ಸಬ್ಸಿಡಿ ದರದಲ್ಲಿ ಸಾಲ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ? ಎಂದು ತಾವು ಪ್ರಶ್ನೆ ಕೇಳಿದ್ದೀರಿ. ಇದಕ್ಕೆ ನಾವು ಸಾಕಷ್ಟು, ಈ ವರ್ಷದಲ್ಲಿಯೇ ಇಲಾಖೆ ವತಿಯಿಂದ ನಾವು ಕೊಡುವಂತಹದ್ದು, ಹನಿ ನೀರಾವರಿ ಅಳವಡಿಕೆ ಸಹಾಯ ಧನ ಒಂದು ಹೆಕ್ಟೇರ್‌ಗೆ 50 ಸಾವಿರ ರೂಪಾಯಿಗಳು. ಅದಕ್ಕೆ ರಾಜ್ಯ ಸರ್ಕಾರದ್ದು 25 ಸಾವಿರ ರೂಪಾಯಿಗಳು, 25 ಸಾವಿರ ರೂಪಾಯಿಗಳು ಫಲಾನುಭವಿ ಕೊಟ್ಟರೆ, ಅದಕ್ಕೆ 37 ಸಾವಿರ ರೂಪಾಯಿಗಳನ್ನು ಘಟಕ ವೆಚ್ಚವೆಂದು

ಕೊಡುವಂತಹದ್ದು, ಅದೇ ರೀತಿ ಹೊಸ ಹಿಪ್ಪುನೇರಳೆ ತಳಿ ನಾಟಿಗೆ ಕೊಡುವಂತಹದ್ದು, 5,500 ರೂಪಾಯಗಳಿಗೆ 50% ಸಹಾಯ ಧನವನ್ನು ಕೇಂದ್ರ ರೇಷ್ಮೆ ಮಂಡಳಿ, 25% ನಾವು, ಒಟ್ಟಾರೆ, 4,125 ರೂಪಾಯಿಗಳನ್ನು ಕೊಟ್ಟಿದ್ದೇವೆ. ಸಾವಿರ ಚದರ ಅಡಿ ಮನೆ ಕಟ್ಟುವುದಕ್ಕೆ ಒಂದು ಲಕ್ಷ 75 ಸಾವಿರ ರೂಪಾಯಿಗಳ ಸಹಾಯ ಧನ ಕೊಟ್ಟಿದ್ದೇವೆ. 600 ಚದರ ಅಡಿ ಮನೆ ಕಟ್ಟುವುದಕ್ಕೆ ಒಂದು ಲಕ್ಷ 50 ಸಾವಿರ ರೂಪಾಯಿಗಳ ಸಹಾಯ ಧನ ಕೊಟ್ಟಿದ್ದೇವೆ. 375 ಚದರ ಅಡಿ ಮನೆಗೆ 50 ಸಾವಿರ ರೂಪಾಯಿ ಆಗುವುದಕ್ಕೆ 25 ಸಾವಿರ ರೂಪಾಯಿಗಳ ಸಹಾಯ ಧನ ಕೊಟ್ಟಿದ್ದೇವೆ. ಚಾಕಿ ಹುಳು ಇಡುವಂತಹದ್ದು Mounting Hall ಎಂದು ಹೇಳಲಾಗುತ್ತದೆ. ಅದಕ್ಕೆ ಹಣ ಕೊಟ್ಟಿರುವುದು. ಸಾಕಾಣಿಕೆ ಮತ್ತು ಕಟ್ಟಡ ಸಲಕರಣೆಗಳಿಗೆ ರೂ. 1,72,500/–ಸಹಾಯ ಧನ. ಹಾಗೆಯೇ CRC centers ಗೆ ಕೊಡುವಂತಹದ್ದು, ಹುಳು ಸಾಕಾಣಿಕೆ, ಇದೆಲ್ಲಾ ಈವರ್ಷ 42 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. 37 ಕೋಟಿ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ, ನಮ್ಮ ರಾಜ್ಯ ಸರ್ಕಾರ 5 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಯಾವುದೂ ಬಾಕಿ ಇಲ್ಲ. 2006 ರಿಂದ 2012 ರವರೆಗೆ ಪೂರ್ತಿ ಹಣ ಕೊಟ್ಟಿದ್ದೇವೆ. ತಾವು ಇನ್ನೊಂದು ಕೇಳಿದ್ದೀರಿ. PLD Bank ಆಗಬಹುದು, S.F.C.S. Service Farmers Co-operative Societies ಮೂಲಕ ಹುಳು ಸಾಕಾಣಿಕೆ ಮನೆಗಳೀಗೆ 3%ಗೆ ಬಡ್ಡಿ ಕೊಡುವಂತಹ ಕಾರ್ಯ ನಾವು ಮಾಡಿಕೊಂಡು ಹೋಗಿದ್ದೇವೆ.

ಶ್ರೀ ಅಮರೇಶ್: ಮಾನ್ಯ ಅಧ್ಯಕ್ಷರೇ . . .

ಆಧ್ಯಕ್ಷರು: ಸುಧೀರ್ಘವಾದ ಉತ್ತರ ಕೊಟ್ಟಿದ್ದಾರೆ

ಶ್ರೀ ಅಮರೇಶ್: ಮಾನ್ಯ ಅಧ್ಯಕ್ಷರೇ, ಉತ್ತರ ಸಿಕ್ಕಿದೆ. ಆದರೆ, ಕೇಂದ್ರ ಸರ್ಕಾರದಿಂದ ಬರುವಂತಹ ಆಹಾರ ಪದಾರ್ಥಗಳನ್ನು ತಮ್ಮದೇ ಆದಂತಹ ರೀತಿಯಲ್ಲಿ ಆಹಾರವನ್ನು ವಿತರಣೆ ಮಾಡಿದ್ದೀರಿ. ಆದರೆ, ಕೇಂದ್ರ ಸರ್ಕಾರಕ್ಕೆ ತೋರಿಸುವಂತಹ ಏನು ಸಬ್ಸಿಡಿ ದರವನ್ನು ನೀವು ನಿಜವಾಗಿಯೂ ಕೂಡ ರಾಜ್ಯ ಸರ್ಕಾರದವರು ಭರಿಸಬೇಕು. ರೈತರಿಗೆ ಒಂದು ಕೆ.ಜಿ.ಗೆ 200–300 ರೂಪಾಯಿಗಳಿಗೆ ಬೆಂಬಲ ಬೆಲೆಯನ್ನು ತಾವು ಘೋಷಣೆ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಆ ಪ್ರಯತ್ನ ನಡೆದಿದೆ. ಈ ಬಜೆಟ್‌ನಲ್ಲಿ ಮತ್ತು ಕೇಂದ್ರ ಬಜೆಟ್‌ನಲ್ಲಿ ಸೇರಿಸಿ ಮಾನ್ಯ ಸದಸ್ಯರಿಗೆ ಇದು ಆಗುವ ಕಾರ್ಯ ಮಾಡಬೇಕು ಎಂದು ಇದೆ. ಇವತ್ತು ರೈತರ ಕಷ್ಟ ನಮಗೆ ಗೊತ್ತಿದೆ. ನಾನೂ ಕೂಡ ರೇಷ್ಮೆಗೂಡು

ಬೆಳೆಯುವಂತಹ ಕುಟುಂಬದಿಂದ ಬಂದಿರುವಂತಹವನು. ಇದನ್ನು ಸರಿಪಡಿಸುವಂತಹ ಕಾರ್ಯ ಮಾಡುತ್ತೇವೆ. ತಾವು ಕೇಳಿರುವಂತಹ ಪ್ರಶ್ನೆ ಏನಿದೆ. ಸಹಾಯ ಧನವನ್ನು ಬಿಡುಗಡೆ ಮಾಡುವಂತಹ ಕಾರ್ಯ ಅದನ್ನು ಮಾಡಿಕೊಡುತ್ತೇವೆ. 100 ರೂಪಾಯಿಗಳನ್ನು ಕೊಡುವಂತಹ ಸಹಾಯ ಧನವನ್ನು ಕೊಡಿಸುತ್ತೇವೆ.

ಅಧ್ಯಕ್ಷರು: ಮಾನ್ಯ ಕಿಮ್ಮನೆ ರತ್ನಾಕರ್ ರವರ ಪ್ರಶ್ನೆ ವರ್ಗಾವಣೆಯಾಗಿದೆ

ಶ್ರೀ ಬಿ. ಎನ್. ಬಚ್ಚೇಗೌಡ: ಡಿ.ಪಿ.ಎ.ಆರ್.ಗೆ ವರ್ಗಾವಣೆಯಾಗಿದೆ

ನರ್ಸರಿಗಳ ಮಾಹಿತಿ

63 (193) ಶ್ರೀ ವಸಂತ ಬಂಗೇರ (ಬೆಳ್ತಂಗಡಿ): ಅರಣ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ನರ್ಸರಿಗಳ ಸಂಖ್ಯೆ ಎಷ್ಟು?

ಆ) 2008 ರಿಂದ ಈವರೆಗೆ ಸದರಿ ನರ್ಸರಿಗಳಲ್ಲಿ ವಿವಿಧ ಜಾತಿಯ ಎಷ್ಟು ಗಿಡಗಳನ್ನು ಬೆಳೆಸಲಾಗಿದೆ; ಗಿಡಗಳನ್ನು ಬೆಳೆಸಲು ಎಷ್ಟು ಮೊತ್ತವನ್ನು ವ್ಯಯಿಸಲಾಗಿದೆ (ವಿವರ ನೀಡುವುದು).

ಇ) 2008 ರಿಂದ ಈವರೆಗೆ ಎಷ್ಟು ಗಿಡಗಳನ್ನು ರೈತರಿಗೆ ಮತ್ತು ಇತರರಿಗೆ ಉಚಿತವಾಗಿ ಹಂಚಲಾಗಿದೆ;

ಈ) ಇಲಾಖಾ ವತಿಯಿಂದ ಎಷ್ಟು ಗಿಡಗಳನ್ನು ಬೆಳಸಲಾಗಿದೆ; ಗಿಡಗಳನ್ನು ನೆಡಲು ಖರ್ಚಾಗಿರುವ ಮೊತ್ತವೆಷ್ಟು? ಕ್ಷೇತ್ರವಾರು ವಿವರ ನೀಡುವುದು?

ಶ್ರೀ ಸಿ. ಪಿ. ಯೋಗೀಶ್ವರ್ (ಅರಣ್ಯ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ಅಧೀನದಲ್ಲಿರುವ ನರ್ಸರಿಗಳ ಸಂಖ್ಯೆ–16.

ಆ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ

ಇ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಈ) ವಿವರಗಳನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.